**ದಿನಾಂಕಃ 24-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 6 ನೇ ಪ್ರತಿವಾದಿ ಪರ ಶ್ರೀಮತಿ ಎಸ್ ಎಂ ಪಿ ವಕೀಲರಿಂದಃ**

ನಮ್ಮ ಮನೆತನಕ್ಕೆ ಒಟ್ಟು 02 ಅಂಗಡಿಗಳು ಮತ್ತು 04 ಮನೆಗಳು ಇರುತ್ತವೆ. 02 ಹೊಲಗಳು ಇದ್ದವು, ಅವುಗಳನ್ನು ನಮ್ಮ ಅಣ್ಣನಾದ ವಾದಿ ಮಾರಾಟ ಮಾಡಿರುತ್ತಾನೆ. ಸದರಿ ಜಮೀನುಗಳನ್ನು ನಮ್ಮ ಅಣ್ಣ ಮತ್ತು ನಮ್ಮ ತಂದೆ ಮಾರಾಟ ಮಾಡಿರುತ್ತಾರೆ ಎಂದು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನಮ್ಮ ಅಣ್ಣ ಮಾರಾಟ ಮಾಡಿದ ಜಮೀನಿನ ನಂಬರನ ಈ ದಾವೆಯಲ್ಲಿ ಸೇರಿಸಿಲ್ಲ. ನಮ್ಮ ತಂದೆ 1990 ಅಕ್ಟೋಂಬರನಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಂದೆ ತೀರಿಕೊಳ್ಳು ಕಾಲದಲ್ಲಿ ದಾವಾ ಆಸ್ತಿಗಳು ನಮ್ಮ ತಂದೆಯ ಹೆಸರಿನಲ್ಲಿ ಇದ್ದವೋ ಇಲ್ಲವೊ ಅಂತ ನನಗೆ ಗೊತ್ತಿರುವುದಿಲ್ಲ. ನಮ್ಮ ತಂದೆ ತೀರಿಕೊಂಡ ನಂತರ ನನ್ನ ಮದುವೆ ಆಗಿರುತ್ತದೆ. ನನ್ನ ಮದುವೆಯಾದ ನಂತರ ಮತ್ತು ತಿಳುವಳಿಕೆ ಬಂದ ನಂತರ ದಾವಾ ಆಸ್ತಿಯಲ್ಲಿ ಪಾಲುಬೇಕು ಅಂತ ಕೇಳಿರುತ್ತೀರಾ ಅಂತ ಕೇಳಲು ಸಾಕ್ಷಿ ನಮಗೆ ಮಾರಾಟ ಮಾಡಿದ ವಿಷಯ ಈಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಾವು ಎಲ್ಲರೂ ಕೂಡಿಯೇ ಇರುತ್ತೇವೆ ಎಂದು ಬರೆಸಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾವು ದಾವೆ ಮಾಡಿದ ಆಸ್ತಿ 2 ನೇ ಪ್ರತಿವಾದಿಯಾದ ನಾರಾಯಣನ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ.

**02.** ಈ ಮೊದಲು 2 ನೇ ಪ್ರತಿವಾದಿಯ ಮಕ್ಕಳು ಆತನ ಮೇಲೆ ದಾವೆ ಮಾಡಿದ ವಿಷಯ ನನಗೆ ಗೊತ್ತಿರುವುದಿಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹಿತ ನಾವು ಮತ್ತು ನಮ್ಮ ಅಣ್ಣ ಸೇರಿ ದಾವಾ ಆಸ್ತಿಯನ್ನು ಪಡೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)</u>

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.